# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020**

ಸಂಖ್ಯೆ: ಬೆಂಅಪ್ರಾ/ಆ/ಉ.ಕಾ–1/ಸಿ.ವಿ./663/2023–24 ದಿನಾಂಕ:07/11/2023

## ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಖಾಲಿಯಿರುವ ಈ ಕೆಳಕಂಡ ಪರಿಶಿಷ್ಟ ಪಂಗಡದ ಹಿಂಬಾಕಿ (Backlog) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1 | ಬೆರಳಚ್ಚುಗಾರ<br>(ರೂ.21400 –42000) | 01 |
| 2 | ಶೀಘ್ರಲಿಪಿಗಾರ<br>(ರೂ.27650 –52650) | 01 |
| | ಒಟ್ಟು ಹುದ್ದೆಗಳು | 02 |

**ನೇಮಕಾತಿ ವಿಧಾನ:**

ಅರ್ಹ ಅಭ್ಯರ್ಥಿಗಳನ್ನು "The Karnataka State Civil Services (Unfilled vacancies reserved for the persons belonging to the Scheduled Castes and the Scheduled Tribes) (Special Recruitment) Rules, 2001" ರನ್ವಯ ನಿಗದಿಪಡಿಸಿದ ಶೈಕ್ಷಣಿಕ ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಶೇಕಡವಾರು ಅಂಕಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**ವಿದ್ಯಾರ್ಹತೆ:**

**ಬೆರಳಚ್ಚುಗಾರ ಹುದ್ದೆ:**

1) ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
2) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಕನ್ನಡ ಮತ್ತು ಇಂಗ್ಲೀಷ್ ಸೀನಿಯರ್ ಗ್ರೇಡ್ ಟೈಪ್‌ರೈಟಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**ಶೀಘ್ರಲಿಪಿಗಾರ ಹುದ್ದೆ:**

1) ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

. . .2

2) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಕನ್ನಡ ಮತ್ತು ಇಂಗ್ಲೀಷ್ ಸೀನಿಯರ್ ಗ್ರೇಡ್ ಟೈಪ್‌ರೈಟಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಕನ್ನಡ ಮತ್ತು ಇಂಗ್ಲೀಷ್ ಸೀನಿಯರ್ ಗ್ರೇಡ್ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**ವಯೋಮಿತಿ:**

ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ವರ್ಷ ತುಂಬಿರಬೇಕು ಹಾಗೂ 40 ವರ್ಷ ಮೀರಿರಬಾರದು. ಮಾಜಿ ಸೈನಿಕರು/ ಅಂಗವಿಕಲರು/ ವಿಧವೆಯರಿಗೆ, ನಿಯಮಾನುಸಾರ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ಅನ್ವಯವಾಗುವುದು.

**ಅರ್ಜಿ ಸಲ್ಲಿಸುವ ವಿಳಾಸ:**

ನಿಗದಿತ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020 ಇವರಿಗೆ ವಿಳಾಸಿಸಿ ಖುದ್ದಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕಛೇರಿಗೆ ಅಥವಾ ಅಂಚೆ ಮೂಲಕ ಸಲ್ಲಿಸತಕ್ಕದ್ದು.

**ಅರ್ಜಿ ಸಲ್ಲಿಸುವ ದಿನಾಂಕ:**

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 09–11–2023.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08–12–2023 ರಂದು ಸಂಜೆ 5.30 ಆಗಿರುತ್ತದೆ.

**ಅಭ್ಯರ್ಥಿಗಳಿಗೆ ಸೂಚನೆಗಳು:**

1. ಶೀಘ್ರಲಿಪಿಗಾರ ಮತ್ತು ಬೆರಳಚ್ಚುಗಾರ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
2. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಅರ್ಜಿ ಸಲ್ಲಿಸಿದ ನಂತರ ಅಭ್ಯರ್ಥಿಗಳು ಅರ್ಜಿಯಲ್ಲಿನ ವಿವರಗಳನ್ನು ತಿದ್ದುಪಡಿ/ಸೇರ್ಪಡೆ ಮಾಡುವಂತೆ ಸಲ್ಲಿಸುವ ಯಾವುದೇ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

. . .3

5. ಆಯ್ಕೆಗೊಂಡ ಅಭ್ಯರ್ಥಿಗಳು ಸರ್ಕಾರದ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್)/ 04/ಪಿಇಟಿ/2005 ದಿನಾಂಕ: 31–03–2006 ರನ್ವಯ ನೂತನ ಪಿಂಚಣಿ ಯೋಜನೆಗೆ ಒಳಪಡುತ್ತಾರೆ (NPS).

6. ನೇಮಕಾತಿ ಕುರಿತು ಪ್ರಾಧಿಕಾರದೊಂದಿಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

7. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:
   (i) ಎಸ್.ಎಸ್.ಎಲ್.ಸಿ. ಪರೀಕ್ಷೆಯ ದೃಢೀಕೃತ ಅಂಕಪಟ್ಟಿ.
   (ii) ನಿಗದಿತ ವಿದ್ಯಾರ್ಹತೆಯ ದೃಢೀಕೃತ ಅಂಕಪಟ್ಟಿಗಳು.
   (iii) ಜಾತಿ ದೃಢೀಕರಣ ಪತ್ರ.

8. ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಕ್ಕೆ ಕಾಯ್ದಿರಿಸಲಾಗಿದೆ.

**ಆಯುಕ್ತರು,**
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

# ಅರ್ಜಿ ನಮೂನೆ

**ಬೆರಳಚ್ಚುಗಾರ ಹುದ್ದೆಗಾಗಿ ಅರ್ಜಿ:**

| |
|---|
| ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ |

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ತಾಯಿಯ ಹೆಸರು | |
| 3 | ತಂದೆಯ ಹೆಸರು | |
| 4 | ಲಿಂಗ | |
| 5 | ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ಜಾತಿ ದೃಢೀಕರಣ ಪ್ರಮಾಣ ಪತ್ರ. | |
| 6 | ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ದೃಡೀಕೃತ ಪ್ರತಿ ಲಗತ್ತಿಸುವುದು) | |
| 7 | ಖಾಯಂ ವಿಳಾಸ. | ವಿಳಾಸ: <br>ತಾಲ್ಲೂಕು: <br>ಜಿಲ್ಲೆ: <br>ರಾಜ್ಯ: <br>ಪಿನ್ ಕೋಡ್: |
| 8 | ಪತ್ರ ವ್ಯವಹಾರಕ್ಕೆ ವಿಳಾಸ. | ವಿಳಾಸ: <br>ತಾಲ್ಲೂಕು: <br>ಜಿಲ್ಲೆ: <br>ರಾಜ್ಯ: <br>ಪಿನ್ ಕೋಡ್: |

. . .2

<table>
<tr><td>9</td><td>ವಿದ್ಯಾರ್ಹತೆ ಅಂಕಗಳ ವಿವರ ನಮೂದಿಸಿ. ಅಂಕಪಟ್ಟಿಯ ದೃಡೀಕೃತ ಪ್ರತಿ ಲಗತ್ತಿಸತಕ್ಕದ್ದು.</td><td>
<table>
<tr><th>ಉತ್ತೀರ್ಣರಾದ ಪರೀಕ್ಷೆ</th><th>ಗರಿಷ್ಠ ಅಂಕಗಳು</th><th>ಪಡೆದ ಅಂಕಗಳು</th></tr>
<tr><td>ಪಿ.ಯು.ಸಿ. ಅಥವಾ ತತ್ಸಮಾನ</td><td></td><td></td></tr>
<tr><td>ಸೀನಿಯರ್ ಗ್ರೇಡ್ ಕನ್ನಡ ಟೈಪ್‌ರೈಟಿಂಗ್</td><td></td><td></td></tr>
<tr><td>ಸೀನಿಯರ್ ಗ್ರೇಡ್ ಇಂಗ್ಲೀಷ್ ಟೈಪ್‌ರೈಟಿಂಗ್</td><td></td><td></td></tr>
</table>
</td></tr>
<tr><td>10</td><td>ನೀವು ವಯಸ್ಸಿನ ಸಡಿಲಿಕೆಯನ್ನು ಕೋರುತ್ತಿದ್ದಲ್ಲಿ (ಮಾಜಿ ಸೈನಿಕ ಅಥವಾ ವಿಕಲಚೇತನ ಅಥವಾ ವಿಧವಾ ಅಭ್ಯರ್ಥಿ ಎಂಬ ಕಾರಣಗಳಿಗಾಗಿ) ದಾಖಲೆ ಲಗತ್ತಿಸಿ.</td><td></td></tr>
<tr><td>11</td><td>ರಾಜ್ಯ/ಕೇಂದ್ರ ಸರ್ಕಾರಿ ಸೇವಕ ಅಥವಾ ರಾಜ್ಯ/ಕೇಂದ್ರ ಸ್ವಾಮ್ಯದ ನೌಕರರಾಗಿದ್ದಲ್ಲಿ ಹುದ್ದೆ, ಪದನಾಮ, ಕಾರ್ಯನಿರ್ವಹಿಸುತ್ತಿರುವ ಕಛೇರಿಯ ವಿಳಾಸದ ವಿವರ ನೀಡಿ.</td><td></td></tr>
<tr><td>12</td><td>ನಿಮ್ಮನ್ನು ಸೇವೆಯಿಂದ ಎಂದಾದರೂ ವಜಾಗೊಳಿಸಲಾಗಿದೆಯೇ ? ವಿವರ ನೀಡಿ.</td><td></td></tr>
<tr><td>13</td><td>ಇನ್ನಾವುದಾದರೂ ಮಾಹಿತಿ.</td><td></td></tr>
</table>

**ಅಭ್ಯರ್ಥಿಯ ಘೋಷಣೆ:**

ನಾನು ನೇಮಕಾತಿಗೆ ಸಂಬಂಧಪಟ್ಟ ಪ್ರಕಟಣೆಯನ್ನು ಗಮನವಿಟ್ಟು ಓದಿರುತ್ತೇನೆ. ಈ ಅರ್ಜಿಯಲ್ಲಿ ನಾನು ಒದಗಿಸಿರುವ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಗೆ ಅನುಸಾರ ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ. ನನ್ನ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳಾಗಲೀ ಅಥವಾ ಶಿಸ್ತು ಕ್ರಮಗಳಾಗಲೀ ಬಾಕಿ ಇರುವುದಿಲ್ಲ ಎಂದು ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಈ ಅರ್ಜಿಯಲ್ಲಿ ಒದಗಿಸಿರುವ ವಿವರಗಳು ಸುಳ್ಳು ಅಥವಾ ತಪ್ಪೆಂದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ನೇಮಕಾತಿಯ ಮುಂದಿನ ಹಂತಗಳಿಗೆ ನಾನು ಅನರ್ಹಗೊಳ್ಳುವುದರ ಜೊತೆಗೆ ನನ್ನ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮಕ್ಕೆ/ಕಾನೂನು ಕ್ರಮಕ್ಕೆ ಒಳಪಡಿಸಲು ಒಪ್ಪಿರುತ್ತೇನೆ.

ದಿನಾಂಕ:

ಸ್ಥಳ: **ಅಭ್ಯರ್ಥಿಯ ಸಹಿ**

# ಅರ್ಜಿ ನಮೂನೆ

**ಶೀಘ್ರಲಿಪಿಗಾರ ಹುದ್ದೆಗಾಗಿ ಅರ್ಜಿ:**

ಅಭ್ಯರ್ಥಿಯ<br>ಇತ್ತೀಚಿನ<br>ಪಾಸ್‌ಪೋರ್ಟ್<br>ಅಳತೆಯ<br>ಭಾವಚಿತ್ರ

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ತಾಯಿಯ ಹೆಸರು | |
| 3 | ತಂದೆಯ ಹೆಸರು | |
| 4 | ಲಿಂಗ | |
| 5 | ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ಜಾತಿ ದೃಢೀಕರಣ ಪ್ರಮಾಣ ಪತ್ರ. | |
| 6 | ಜನ್ಮ ದಿನಾಂಕ<br>(ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ದೃಡೀಕೃತ ಪ್ರತಿ ಲಗತ್ತಿಸುವುದು) | |
| 7 | ಖಾಯಂ ವಿಳಾಸ. | ವಿಳಾಸ:<br>ತಾಲ್ಲೂಕು:<br>ಜಿಲ್ಲೆ:<br>ರಾಜ್ಯ:<br>ಪಿನ್ ಕೋಡ್: |
| 8 | ಪತ್ರ ವ್ಯವಹಾರಕ್ಕೆ ವಿಳಾಸ. | ವಿಳಾಸ:<br>ತಾಲ್ಲೂಕು:<br>ಜಿಲ್ಲೆ:<br>ರಾಜ್ಯ:<br>ಪಿನ್ ಕೋಡ್: |

. . .2

<table>
<tr><td>9</td><td>ವಿದ್ಯಾರ್ಹತೆ ಅಂಕಗಳ ವಿವರ ನಮೂದಿಸಿ. ಅಂಕಪಟ್ಟಿಯ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು.</td><td>
<table>
<tr><th>ಉತ್ತೀರ್ಣರಾದ ಪರೀಕ್ಷೆ</th><th>ಗರಿಷ್ಠ ಅಂಕಗಳು</th><th>ಪಡೆದ ಅಂಕಗಳು</th></tr>
<tr><td>ಪಿ.ಯು.ಸಿ. ಅಥವಾ ತತ್ಸಮಾನ</td><td></td><td></td></tr>
<tr><td>ಸೀನಿಯರ್ ಗ್ರೇಡ್ ಕನ್ನಡ ಟೈಪ್‌ರೈಟಿಂಗ್</td><td></td><td></td></tr>
<tr><td>ಸೀನಿಯರ್ ಗ್ರೇಡ್ ಇಂಗ್ಲೀಷ್ ಟೈಪ್‌ರೈಟಿಂಗ್</td><td></td><td></td></tr>
<tr><td>ಸೀನಿಯರ್ ಗ್ರೇಡ್ ಕನ್ನಡ ಶೀಘ್ರಲಿಪಿ</td><td></td><td></td></tr>
<tr><td>ಸೀನಿಯರ್ ಗ್ರೇಡ್ ಇಂಗ್ಲೀಷ್ ಶೀಘ್ರಲಿಪಿ</td><td></td><td></td></tr>
</table>
</td></tr>
<tr><td>10</td><td>ನೀವು ವಯಸ್ಸಿನ ಸಡಿಲಿಕೆಯನ್ನು ಕೋರುತ್ತಿದ್ದಲ್ಲಿ (ಮಾಜಿ ಸೈನಿಕ ಅಥವಾ ವಿಕಲಚೇತನ ಅಥವಾ ವಿಧವಾ ಅಭ್ಯರ್ಥಿ ಎಂಬ ಕಾರಣಗಳಿಗಾಗಿ) ದಾಖಲೆ ಲಗತ್ತಿಸಿ.</td><td></td></tr>
<tr><td>11</td><td>ರಾಜ್ಯ/ಕೇಂದ್ರ ಸರ್ಕಾರಿ ಸೇವಕ ಅಥವಾ ರಾಜ್ಯ/ ಕೇಂದ್ರ ಸ್ವಾಮ್ಯದ ನೌಕರರಾಗಿದ್ದಲ್ಲಿ ಹುದ್ದೆ, ಪದನಾಮ, ಕಾರ್ಯನಿರ್ವಹಿಸುತ್ತಿರುವ ಕಛೇರಿಯ ವಿಳಾಸದ ವಿವರ ನೀಡಿ.</td><td></td></tr>
<tr><td>12</td><td>ನಿಮ್ಮನ್ನು ಸೇವೆಯಿಂದ ಎಂದಾದರೂ ವಜಾಗೊಳಿಸಲಾಗಿದೆಯೇ ? ವಿವರ ನೀಡಿ.</td><td></td></tr>
<tr><td>13</td><td>ಇನ್ನಾವುದಾದರೂ ಮಾಹಿತಿ.</td><td></td></tr>
</table>

**ಅಭ್ಯರ್ಥಿಯ ಘೋಷಣೆ:**

ನಾನು ನೇಮಕಾತಿಗೆ ಸಂಬಂಧಪಟ್ಟ ಪ್ರಕಟಣೆಯನ್ನು ಗಮನವಿಟ್ಟು ಓದಿರುತ್ತೇನೆ. ಈ ಅರ್ಜಿಯಲ್ಲಿ ನಾನು ಒದಗಿಸಿರುವ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಗೆ ಅನುಸಾರ ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ. ನನ್ನ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳಾಗಲೀ ಅಥವಾ ಶಿಸ್ತು ಕ್ರಮಗಳಾಗಲೀ ಬಾಕಿ ಇರುವುದಿಲ್ಲ ಎಂದು ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಈ ಅರ್ಜಿಯಲ್ಲಿ ಒದಗಿಸಿರುವ ವಿವರಗಳು ಸುಳ್ಳು ಅಥವಾ ತಪ್ಪೆಂದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ನೇಮಕಾತಿಯ ಮುಂದಿನ ಹಂತಗಳಿಗೆ ನಾನು ಅನರ್ಹಗೊಳ್ಳುವುದರ ಜೊತೆಗೆ ನನ್ನ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮಕ್ಕೆ /ಕಾನೂನು ಕ್ರಮಕ್ಕೆ ಒಳಪಡಿಸಲು ಒಪ್ಪಿರುತ್ತೇನೆ.

ದಿನಾಂಕ:

ಸ್ಥಳ: **ಅಭ್ಯರ್ಥಿಯ ಸಹಿ**

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020**

ಸಂಖ್ಯೆ: ಬೆಂಅಪ್ರಾ/ಆ/ಉ.ಕಾ–1/ಸಿ.ವಿ./663/2023–24 ದಿನಾಂಕ:07/11/2023

## ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಖಾಲಿಯಿರುವ ಈ ಕೆಳಕಂಡ ಪರಿಶಿಷ್ಟ ಪಂಗಡದ ಹಿಂಬಾಕಿ (Backlog) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1 | ಬೆರಳಚ್ಚುಗಾರ (ರೂ.21400 –42000) | 01 |
| 2 | ಶೀಘ್ರಲಿಪಿಗಾರ (ರೂ.27650 –52650) | 01 |
| | ಒಟ್ಟು ಹುದ್ದೆಗಳು | 02 |

ಮೇಲೆ ತಿಳಿಸಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಅರ್ಜಿ ನಮೂನೆ, ನೇಮಕಾತಿ ವಿಧಾನ, ವಿದ್ಯಾರ್ಹತೆ, ವಯೋಮಿತಿ, ಅರ್ಜಿ ಸಲ್ಲಿಸಬೇಕಾದ ವಿಳಾಸ, ಅರ್ಜಿ ಸಲ್ಲಿಸಲು ಪ್ರಾರಂಭಿಕ ಮತ್ತು ಕೊನೆಯ ದಿನಾಂಕ ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಲತಾಣ https://bdabangalore.org/ ಮತ್ತು https://bda.karnataka.gov.in/ ಅನ್ನು ಸಂಪರ್ಕಿಸುವಂತೆ ಈ ಮೂಲಕ ತಿಳಿಸಿದೆ.

ಸಹಿ/–  
ಆಯುಕ್ತರು,  
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,  
ಬೆಂಗಳೂರು.